ಆ ಸೆಳವುಗಳಿಗೂ ಒಂದು ಗತಿ, ದಿಕ್ಕು ಕಲ್ಪಿಸುವ ಕೆಲಸ ಬರಹಗಾರನದು. ಆದರೆ–ಇದು ಒಂದೇ ಒಂದು ಪಾತಳಿಯಲ್ಲಿ ಆಗುವ ಕೆಲಸ, ಇದೊಂದೇ ನನ್ನ ಪಾತಳಿ, ಇದೇ ನಾನು–ಎಂದುಕೊಳ್ಳುವುದು ಭ್ರಮೆಯಲ್ಲದೆ ಮತ್ತೇನು?' (ಹೂವು ಹೆಣ್ಣು ತಾರೆ–1982)

'ಬಂಡಾಯ ಸಾಹಿತ್ಯವೆಂದರೆ ಅದು ಕೇವಲ ಸಿಟ್ಟು, ರೋಷ, ಹತಾಷೆ, ಬೆಂಕಿ, ನೆತ್ತರುಗಳ ಸ್ಫೋಟ; ಅಲ್ಲಿ ಸೌಂದರ್ಯಕ್ಕೆ ಸೂಕ್ಷ್ಮಕ್ಕೆ, ಕಲೆಗಾರಿಕೆಗೆ ಸ್ಥಾನವಿಲ್ಲ–ಎಂದು ಕೆಲ 'ನವ್ಯ'ದವರು ಆರ್ಭಟಿಸುವುದೂ ಈ ಆರ್ಭಟದ ಸಮರ್ಥನೆಗೇ ಎಂಬಂತೆ ಕೆಲವರು ಆ ರೀತಿಯ 'ಬಂಡಾಯ' ಸಾಹಿತ್ಯವನ್ನೇ ಸೃಷ್ಟಿಸುವುದೂ ಇಂದು ನಾವು ಕಾಣುತ್ತಿರುವ ಕೆಲ ವೈಪರೀತ್ಯಗಳು.' (ಹೂವು ಹೆಣ್ಣು ತಾರೆ–1982)

'ನಾವು ಬದುಕನ್ನು ಅನುಭವಿಸುವ, ಗ್ರಹಿಸುವ ಪರಿಯಲ್ಲೇ ಒಂದು ಅಸ್ವಾಭಾವಿಕವಾದ, ನಮಗೆ ನಾವೇ ಸೃಷ್ಟಿಸಿಕೊಂಡ ಒಂದು 'ಬಿರುಕು' ಇದೆ. ಭಾಷೆಯ ಸಮಷ್ಟಿ ಮಾಧ್ಯಮದ ಮೂಲಕ ಬದುಕಿನ ಎಲ್ಲ ನೆಲೆಗಳಲ್ಲಿ ಹರಿದಾಡಬಲ್ಲ ಬರಹಗಾರರು ಮಾತ್ರ ಈ ಬಿರುಕನ್ನು ಅಳಿಸಿಹಾಕಿ ಮತ್ತೆ 'ಸ್ವಾಭಾವಿಕ'ವಾದ, ಸೂಕ್ಷ್ಮಗಳನ್ನು ಕಳೆದುಕೊಳ್ಳದಂಥ ಸಮಗ್ರತೆಯನ್ನು ಸಾಧಿಸಬಲ್ಲರೆಂದು ನನ್ನ ನಂಬಿಕೆ.' (ಹೂವು ಹೆಣ್ಣು ತಾರೆ–1982)

'ನನ್ನ ಮೊದಲ ಪ್ರೀತಿ ಯಾವಾಗಲೂ ಕಾವ್ಯವೇ, ನನ್ನ ಅರಿವಿನ ಒಳಗೋ, ಅರಿವಿನ ಆಚೆಗೋ ನನಗೆ ದಕ್ಕುವುದೆಲ್ಲ ಮೆಟಾಫರು(ರೂಪಕ)ಗಳ ಮೂಲಕವೇ. ಅದೇ ಮುಂದೆ ಕವನವೋ, ನಾಟಕವೋ, ಪ್ರಬಂಧವೋ, ಕತೆಯೋ ಅಥವಾ ಬರೀ ಮಾತೋ ಆಗಿ ಒಂದು ರೂಪ ತಾಳುತ್ತದೆ.' (ಮತ್ತೊಂದು ಎಲೆ–2017)

ಈ ಎಲ್ಲ ಮಾತುಗಳಲ್ಲಿರುವ 'ಗಂಭೀರ ಚಿಂತನೆಯ ಕವಿ' ಚಂಪಾ ನಮ್ಮನ್ನು ಅಗಲಿದ್ದಾರೆ. ಅವರ ಮಗಳು ಮೀನಾ ಪಾಟೀಲ್ ಅವರು ತಮ್ಮ ತಂದೆ ಅಗಲಿದ ದಿನ, ನಮ್ಮೆದುರು 'ನಮ್ಮಪ್ಪ ಅಕ್ಷರಗಳಲ್ಲಿ ಬದುಕಿದ್ದಾರೆ' ಎಂದದ್ದು ಅಪ್ಪಟ ಸತ್ಯ. ಚಂಪಾ ಅವರ ಬದುಕಿನ ಅಕ್ಷರಗಳಿಗೆ ನನ್ನದೊಂದು ಅಕ್ಷರ ಸ್ಪಂದನ; ನಮನ.

## ಬರಗೂರು ರಾಮಚಂದ್ರಪ್ಪ

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರು ಗ್ರಾಮದವರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದರು. ಬಂಡಾಯ ಸಾಹಿತ್ಯ ಸಂಘಟನೆಯ ಸ್ಥಾಪಕರಲ್ಲಿ ಒಬ್ಬರಾದ ಇವರು ಅದರ ಸಂಚಾಲಕರಾಗಿ ಮುನ್ನಡೆಸಿದರು. ಈಗಲೂ ಸಹ ಅದು ಅವರ ಮಾರ್ಗದರ್ಶನದಲ್ಲಿ ಮುಂದುವರಿಯುತ್ತಿದೆ. ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕರಾಗಿ ಹಲವಾರು ಕೃತಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳು: 'ಮರಕುಟಿಗ', 'ಮಗುವಿನ ಹಾಡು', 'ಸಾಹಿತ್ಯ ಮತ್ತು ರಾಜಕಾರಣ', 'ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ', 'ವರ್ತಮಾನ', 'ಪರಂಪರೆಯೊಂದಿಗೆ ಪಿಸು ಮಾತು', 'ಮರ್ಯಾದಸ್ಥ ಮನುಷ್ಯರಾಗೋಣ', 'ಸಿನಿಮಾ: ಒಂದು ಜನಪದ ಕಲೆ', 'ಶಬರಿ', 'ಅಡಗೂಲಜ್ಜಿ' ಮುಂತಾದವುಗಳು. ಇವರು 'ಒಂದು ಊರಿನ ಕತೆ', 'ಬೆಂಕಿ', 'ಸೂರ್ಯ', 'ಕರಡಿಪುರ', 'ಹಗಲುವೇಷ', ತಾಯಿ', 'ಶಾಂತಿ' 'ಅಮೃತಮತಿ' ಸಿನಿಮಾಗಳನ್ನು ನಿರ್ದೇಶಿಸಿದ್ದು ಅವುಗಳಿಗೆ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ. ಸಾಹಿತ್ಯ ಕ್ಷೇತ್ರದ ಪ್ರಮುಖ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.